
ಸಂವಾದದಲ್ಲಿ ಭಾಗವಹಿಸಲು ಆಹ್ವಾನಿತರಾಗಿ ಭಾಷಾಶಾಸ್ತ್ರಜ್ಞ–ಕಾದಂಬರಿಕಾರ ಉಂಬರ್ಟೊ ಇಕೊ ಒಂದು ಬದಿಯಲ್ಲಿದ್ದರೆ, ಚಲನಚಿತ್ರ ನಿರ್ದೇಶಕ, ನಾಟಕಕಾರ ಜ್ಹಾಂ–ಕ್ಲಾಡ್ ಕಾರಿಯೇ ಮತ್ತೊಂದೆಡೆ ಇದ್ದಾರೆ. ಇಬ್ಬರೂ ಪುಸ್ತಕ ಪ್ರೇಮಿಗಳು, ಪುಸ್ತಕದ ಚರಿತ್ರೆಯನ್ನು ಆಳವಾಗಿ ಅರಿತಿರುವವರು. ಸಾಹಿತ್ಯವನ್ನೂ, ಅದರ ಮಹತ್ವವನ್ನೂ ಅರಿತವರು. ಹೀಗಾಗಿ ಅವರ ಸಂವಾದ, ಪುಸ್ತಕ ಎನ್ನುವ ಭೌತಿಕ ವಸ್ತುವಿನ ಭವಿಷ್ಯವಲ್ಲದೇ, ಅದರ ಚರಿತ್ರೆ, ಅದಕ್ಕಿರುವ ಸಾಧ್ಯತೆ, ಸವಾಲುಗಳು, ಅವುಗಳನ್ನು ಸಂಗ್ರಹಿಸಿಡುವ ರೀತಿಯನ್ನೂ ವ್ಯಾಪಿಸಿದೆ. ಪುಸ್ತಕಗಳ ಸಂದರ್ಭದ ಚರ್ಚೆಯಲ್ಲಿ ಬರುವ ವಿಚಾರಗಳು ಇತರ ಮಾಧ್ಯಮಗಳಿಗೆ– ಮುಖ್ಯವಾಗಿ ಸಿನಿಮಾಕ್ಕೆ– ಹೇಗೆ ವರ್ತಿಸುತ್ತವೆ ಎನ್ನುವುದೂ ಇಲ್ಲಿದೆ. ಹೀಗಾಗಿಯೇ ಹತ್ತುವರ್ಷಗಳ ಕೆಳಗೇ ಈ ಪುಸ್ತಕ ಪ್ರಕಟವಾಗಿದ್ದರೂ ಓದಲು, ವಿಚಾರ ಮಾಡಲು ಸಮಕಾಲೀನ ಎನ್ನಿಸುವಂತಿದೆ.




ಆನ್‌ಲೈನ್ ಪುಸ್ತಕಗಳು, ಇ–ಪುಸ್ತಕಗಳು, ಕೇಳು–ಪುಸ್ತಕಗಳ ಆಯ್ಕೆಯಿರುವ ಈ ಕಾಲದಲ್ಲಿ ಕಾಗದದ ಮೇಲೆ ಮುದ್ರಿತವಾಗಿರುವ ಪುಸ್ತಕ ಎನ್ನುವ ಮಾಧ್ಯಮದ ಪರಿಭಾಷೆಯನ್ನೇ ಬದಲಿಸಬೇಕೇ ಎನ್ನುವ ಪ್ರಶ್ನೆಯನ್ನು ಇಬ್ಬರೂ ಪರಿಶೀಲಿಸುತ್ತಾರೆ. ಸಾಮಾನ್ಯವಾಗಿ ಪುಸ್ತಕದ ಭೌತಿಕತೆಯನ್ನು ಚರ್ಚಿಸುವಾಗ ಅದರ ಪುಟಗಳನ್ನು ಸವರುವ, ಹೊಸ ಪುಸ್ತಕದ ಅಂಟಿನ ಪರಿಮಳ ಈ ನಾಸ್ಟಾಲ್ಜಿಯಾವನ್ನು ಚರ್ಚೆಗೆ ತರುವುದನ್ನು ಕಂಡಿದ್ದೇವೆ. ಆದರೆ, ಉಂಬರ್ಟೊ ಇಕೊ ಮತ್ತು ಕಾರಿಯೇ ಇದನ್ನು ಆಳವಾಗಿ ಚರ್ಚಿಸುತ್ತಾರೆ. ಒಂದು ಗಹನ ಒಳನೋಟವನ್ನು ಇಬ್ಬರೂ ಓದುಗರ ಮುಂದಿಡುತ್ತಾರೆ. ಇಂದು ಇ–ಪುಸ್ತಕ, ಇಂಟರ್ನೆಟ್, ಆನ್‌ಲೈನ್ ಎಂದು ಪಠ್ಯವನ್ನು ಸ್ವೀಕರಿಸುತ್ತಿದ್ದೇವೆ. ಪುಸ್ತಕ ಎನ್ನುವುದು ಪಠ್ಯವನ್ನು ಕಾಪಿಡುವ ಮಾಧ್ಯಮವೆನ್ನುವುದಾದರೆ ಅದು ಮೊದಲಿಗೆ ಆಫ್‌ಲೈನ್ ಕಂಪ್ಯೂಟರುಗಳಲ್ಲಿ, ನಂತರಕ್ಕೆ ಫ್ಲಾಪಿಗಳಲ್ಲಿ, ಸಿ.ಡಿ.ಗಳಲ್ಲಿ, ಯುಎಸ್‌ಬಿ ಕಡ್ಡಿಗಳಲ್ಲಿ, ಮೋಡದ ಮೇಲೆ, ಹೀಗೆ ಅದನ್ನು ಸೇವ್ ಮಾಡಲಾಗುತ್ತಿದೆ. ಗಮ್ಮತ್ತಿನ ವಿಷಯವೆಂದರೆ ಮಾಧ್ಯಮಗಳು ವೇಗಗತಿಯಲ್ಲಿ ಬದಲಾದರೂ ಮೂಲಭೂತವಾಗಿ ಕಾಗದದ ಮೇಲೆ ಮುದ್ರಿತವಾಗಿ ಕಾಪಿಡುವ ತಂತ್ರ ಗಟ್ಟಿಯಾಗಿ ಮುಂದುವರೆದಿದೆ. ಹೀಗಾಗಿ ಪುಸ್ತಕದ ಅವಸಾನದ ಭವಿಷ್ಯವಾಣಿ ನುಡಿಯುವ ಸಂದರ್ಭದಲ್ಲಿ ಆಧುನಿಕ ತಂತ್ರಜ್ಞಾನವೇ ಅದಕ್ಕಿಂತ ನವೀನ ತಂತ್ರಜ್ಞಾನದಿಂದ ಅವಸಾನವಾಗುತ್ತಿರುವುದನ್ನು ಕಾಣಬಹುದು ಎನ್ನುವ ವಿಚಾರವನ್ನು ಗಮನಿಸಬೇಕು.

ಇದು ಕೇವಲ ಪುಸ್ತಕಗಳಿಗೆ ಸಂಬಂಧಿಸಿದ್ದಲ್ಲ. ಬದಲಿಗೆ ನೆನಪುಗಳನ್ನು, ಇತಿಹಾಸವನ್ನು ದಾಖಲಿಸುವ ಪ್ರಕ್ರಿಯೆಗೆ ಸಂಬಂಧಿಸಿದ್ದು. ಸಿನಿಮಾವನ್ನು ತಯಾರಿಸುವ ಮತ್ತು ಕಾಣುವ ಪ್ರಕ್ರಿಯೆಯೂ ಈ ಕಾಲಘಟ್ಟದಲ್ಲಿ ಬದಲಾಗಿದೆ. ಹೊಸ ತಂತ್ರಜ್ಞಾನ, ಹೊಸ ಸಂಗೀತ, ಹೊಸ ರೀತಿಯ ಕ್ಯಾಮೆರಾಗಳಿಂದಾಗಿ ದೃಶ್ಯಮಾಧ್ಯಮ ಸಮೃದ್ಧವಾದರೂ, ನಾಟಕ, ಸಂಗೀತ ಕಛೇರಿ, ರಂಗಮಂದಿರ, ಸಿನಿಮಾಮಂದಿರಗಳು ಅದೃಶ್ಯವಾಗಿಲ್ಲ. ತಂತ್ರಜ್ಞಾನದ ಪರಿಕರಗಳು (ಟೈಪ್‌ರೈಟರು, ಕ್ಯಾಸೆಟ್ ಪ್ಲೇಯರು, ಸಿ.ಡಿ. ಪ್ಲೇಯರು, ಅಚ್ಚುಯಂತ್ರ) ಬದಲಾಗಿದ್ದರೂ, ಮಾನವನ ಮೂಲಭೂತ ಪಾತ್ರವನ್ನು ಅಲ್ಲಗಳೆಯುವದು ಸಾಧ್ಯವಿಲ್ಲ. ಹೀಗಾಗಿ ಮುದ್ರಿತ ಪುಸ್ತಕ ಪರಂಪರಾಗತವಾಗಿ ನಮ್ಮ ನೆನಪುಗಳನ್ನೂ, ನಮ್ಮ ಸಂಸ್ಕೃತಿಯನ್ನು ದಾಖಲಿಸುತ್ತಾ, ಮರು ವ್ಯಾಖ್ಯಾನಿಸುತ್ತಾ ಬಂದಿರುವ ಪರಂಪರೆ ತಕ್ಷಣಕ್ಕೆ ಇಲ್ಲವಾಗುವುದು ಕಷ್ಟದ ಮಾತೇ.

ಓಲೆಗರಿಯ ಮೇಲಿನ ಸಾಹಿತ್ಯ ದಾಖಲೆ, ನಂತರ ಕಾಗದದ ಮುದ್ರಣ ಎಲ್ಲವೂ ನಮ್ಮ ನೆನಪನ್ನು